**ದಿನಾಂಕಃ 05-03-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಸಿ ಎನ್ ಎಸ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಬಾಬ್ತು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಅದರಲ್ಲಿ ಹೇಳಿ ಬರೆಸಿರುವ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸಾಕ್ಷಿದಾರರು ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

| | |
|---|---|
| ನಿಪಿ-1 | ಓ.ಎಸ್ ನಂಃ 271/2018 ರಲ್ಲಿಯ ತೀರ್ಪು ಮತ್ತು ದೃಢೀಕೃತ ನಕಲು |

ಆದ್ದರಿಂದ ಅರ್ಜಿಯಲ್ಲಿ ಕೇಳಿದಂತೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

1. ಪ್ರಮಾಣ ಪತ್ರ ಬರೆಯಲು ಯಾರು ಮಾಹಿತಿ ನೀಡಿದ್ದಾರೆ ಎನ್ನುವುದು ಗೊತ್ತಿಲ್ಲ . ಸಾಕ್ಷಿಯು ಮುಂದುವರೆದು ನಾನೇ ಸ್ವ ಇಚ್ಚೆಯಿಂದ ಮಾಹಿತಿ ನೀಡಿದ್ದೇನೆ ಎಂದು ನುಡಿಯುತ್ತಾರೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿವೆ. ನನ್ನ ಖಾಯಂ ವಾಸಸ್ಥಳ ನೇಶ್ವಿ ಗ್ರಾಮ.

2. ಎದುರುದಾರನಿಂದ ನಾನು 5 ಲಕ್ಷ ರೂಪಾಯಿಗಳನ್ನು ಕೈಗಡವಾಗಿ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ . ಸದರಿ ಹಣದ ಕುರಿತು ಆಕ್ಸಿಸ್ ಬ್ಯಾಂಕ್ ರಾಣೇಬೆನ್ನೂರು ಶಾಖೆಯ ಚೆಕ್ ಸಹ ನೀಡಿದ್ದೆ ಎಂದರೆ ಸರಿಯಲ್ಲ . ನಾನು ಎದುರುದಾರನಿಂದ ಹಣ ಪಡೆದುಕೊಂಡಿದ್ದರೂ ಸಹ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಣ ಪಡೆದು ಚೆಕ್ ನೀಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹಣದ ಕುರಿತು ಆತ

ನನ್ನ ವಿರುದ್ಧ ಓ ಎಸ್ ನಂಃ 271/2018 ರಲ್ಲಿ ದಾವೆ ದಾಖಲಿಸಿದ್ದ ಎನ್ನುವುದು ಗೊತ್ತಿಲ್ಲ. ಸದರಿ ದಾವೆಯ ಸಮನ್ಸ ನಾನು ಗ್ರಾಮದಲ್ಲಿ ಇಲ್ಲ ಎಂಬ ಶರಾದೊಂದಿಗೆ ಮರಳಿ ಬಂದಿತ್ತು ಎಂದರೆ ಸಾಕ್ಷಿಯು ತಾನು ಊರಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ನೇಶ್ವಿ ಗಾಮದಲ್ಲಿ ಖಾಯಂ ಆಗಿ ವಾಸಿಸುತ್ತಿದ್ದರೂ ಸಹ ಸಮನ್ಸ ಜಾರಿ ಮಾಡಲು ಬಂದಿದ್ದ ಸಿಬ್ಬಂದಿಯೊಂದಿಗೆ ಮಿಲಾಪೆಯಾಗಿ ನ್ಯಾಯಾಲಯಕ್ಕೆ ಸುಳ್ಳು ಶರಾ ಬರೆಯಿಸಿ, ವರದಿ ನೀಡಿಸಿದ್ದೇನೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ತಾನು ಡಿಸೆಂಬರ್ 2013 ರಿಂದ ನೇಶ್ವಿ ಗ್ರಾಮದಲ್ಲಿ ವಾಸಿಸುತ್ತಿರಲಿಲ್ಲ ಎಂದು ನುಡಿಯುತ್ತಾರೆ. 2013 ರಿಂದ ನೇಶ್ವಿ ಗ್ರಾಮದಲ್ಲಿ ವಾಸಿಸುತ್ತಿರಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸದರಿ ದಾವೆಯಲ್ಲಿಯ ಸಮನ್ಸ ನ್ನು ದಿನಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕವೂ ಜಾರಿ ಮಾಡಲಾಗಿತ್ತು ಎಂದರೆ ಸರಿಯಲ್ಲ . ನನಗೆ ದಾವೆಯ ಕುರಿತು ಮಾಹಿತಿ ಇದ್ದರೂ ಸಹ, ಉದ್ದೇಶ ಪೂರ್ವಕವಾಗಿ ಹಾಜರಾಗಿಲ್ಲ ಎಂದರೆ ಸರಿಯಲ್ಲ. ದಾವೆ ಚೌಕಾಸಿಯಾಗಿ ಡಿಕ್ರಿಯಾಗಿರುವ ವಿಷಯ ಗೊತ್ತಿದ್ದರುಾ ಸಹ ಪ್ರಸ್ತುತ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ವಾದಿಗೆ ಹಣ ನೀಡಬಾರದು ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.